# **ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆಯಡಿ 2017-18ನೇ ಸಾಲಿಗೆ ರಾಜ್ಯ ವಲಯದ C&Q-MVS ಘಟಕದಡಿ ಬಹುಗ್ರಾಮ ನೀರು ಸರಬರಾಜು (MVS) ಕಾಮಗಾರಿಗಳಿಗಾಗಿ ಅನುದಾನ ಬಿಡುಗಡೆ ಮಾಡುವ ಕುರಿತು.

**ಓದಲಾಗಿದೆ:**
(1) ಆರ್ಥಿಕ ಇಲಾಖೆಯ ಸಹಮತಿ ಸಂ.ಆಇ/618/ವೆಚ್ಚ-6/2017, ದಿನಾಂಕ 02-02-2018.
(2) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/137/ಗ್ರಾಕುನೀ&ನೈಇ/2017, ಬೆಂಗಳೂರು, ದಿನಾಂಕ 06-02-2018.
(3) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/46/ಗ್ರಾಕುನೀ&ನೈಇ/2017, ಬೆಂಗಳೂರು, ದಿನಾಂಕ 05-03-2018.
(4) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/137/ಗ್ರಾಕುನೀ&ನೈಇ/2017, ಬೆಂಗಳೂರು, ದಿನಾಂಕ 06-02-2018.

## **ಪೀಠಿಕೆ:**

ಮೇಲೆ ಓದಲಾದ ಉಲ್ಲೇಖ (1) ರಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆಯಡಿ SCP & TSP ಅಡಿ 2017-18ನೇ ಸಾಲಿನ ಪೂರಕ ಅಂದಾಜು-3 ರಲ್ಲಿ ಹೆಚ್ಚುವರಿಯಾಗಿ ಲೆಕ್ಕ ಶೀರ್ಷಿಕೆ 2215-01-102-9-08 ಅಡಿ ಒಟ್ಟು ರೂ.9000.00 ಲಕ್ಷಗಳನ್ನು ಬಿಡುಗಡೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯು ಸಹಮತಿಸಿರುತ್ತದೆ.

ಉಲ್ಲೇಖ (2) ರ ಆದೇಶದಲ್ಲಿ ರಾಜ್ಯದ ಪಾಲಿನ ಹೆಚ್ಚುವರಿ ಅನುದಾನವನ್ನು **SCP** ಲೆಕ್ಕ ಶೀರ್ಷಿಕೆ 2215-01-102-9-08-422 ಅಡಿ ರೂ.6000.00 ಲಕ್ಷಗಳು ಹಾಗೂ ಟಿ.ಎಸ್.ಪಿ. ಲೆಕ್ಕ ಶೀರ್ಷಿಕೆ 2215-01-102-9-08-423 ಅಡಿ ರೂ.3000.00 ಲಕ್ಷಗಳು ಒಟ್ಟಾರೆ ರೂ.9000.00 ಲಕ್ಷಗಳ ಅನುದಾನವನ್ನು ಲಕ್ಷಗಳನ್ನು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ಈಗಾಗಲೇ ಬಿಡುಗಡೆಗೊಳಿಸಲಾಗಿರುತ್ತದೆ.

ಉಲ್ಲೇಖ (3) ರ ಆದೇಶದಲ್ಲಿ ರಾಜ್ಯ ವಲಯದ ಅನುದಾನ ಮರು ಹೊಂದಾಣಿಕೆ ಮಾಡಿಲಾಗಿ ಒಟ್ಟು ರೂ.8000.10ಲಕ್ಷಗಳು ಲಬ್ಯವಿರುತ್ತದೆ.

ಉಲ್ಲೇಖ (4) ರ ಆದೇಶದಲ್ಲಿ ರಾಜ್ಯದ ಪಾಲಿನ ಹೆಚ್ಚುವರಿ ಅನುದಾನವನ್ನು **SCP** ಲೆಕ್ಕ ಶೀರ್ಷಿಕೆ 2215-01-102-9-08-422 ಅಡಿ ರೂ.6000.00 ಲಕ್ಷಗಳು ಹಾಗೂ ಟಿ.ಎಸ್.ಪಿ. ಲೆಕ್ಕ ಶೀರ್ಷಿಕೆ 2215-01-102-9-08-423 ಅಡಿ ರೂ.3000.00 ಲಕ್ಷಗಳು ಒಟ್ಟಾರೆ ರೂ.9000.00 ಲಕ್ಷಗಳ ಅನುದಾನವನ್ನು ಲಕ್ಷಗಳನ್ನು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ಈಗಾಗಲೇ ಬಿಡುಗಡೆಗೊಳಿಸಲಾಗಿರುತ್ತದೆ.

ಮುಂದುವರೆದು, ಸದರಿ ಲಭ್ಯವಿರುವ ರಾಜ್ಯ ವಲಯದ ಅನುದಾನದಲ್ಲಿ ಪ್ರಸ್ತುತ **C&Q ಘಟಕದ ಬಹುಗ್ರಾಮ ನೀರು ಸರಬರಾಜು (MVS) ಕಾಮಗಾರಿಗಳಿಗಾಗಿ** ಒಟ್ಟಾರೆ ರೂ.4059.60 ಲಕ್ಷಗಳ ಅನುದಾನವನ್ನು ರಾಜ್ಯದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳಿಗೆ **ಕಾಮಗಾರಿವಾರು** ಬಿಡುಗಡೆ ಮಾಡಲು ತೀರ್ಮಾನಿಸಲಾಗಿರುತ್ತದೆ. ಆದ್ದರಿಂದ, ಈ ಕೆಳಕಂಡ ಆದೇಶ.

## **ಸರ್ಕಾರದ ಆದೇಶ ಸಂ.ಗ್ರಾಅಪ/46/ಗ್ರಾಕುನೀ&ನೈಇ/2017, ಬೆಂಗಳೂರು, ದಿನಾಂಕ 24-03-2018**

ಪೀಠಿಕೆಯಲ್ಲಿನ ವಾಸ್ತವಾಂಶಗಳ ಹಿನ್ನೆಲೆಯಲ್ಲಿ, 2017-18ನೇ ಸಾಲಿನಲ್ಲಿ ಗ್ರಾಮೀಣ ಕುಡಿಯುವ ನೀರು ಯೋಜನೆಯ ರಾಜ್ಯದ ಪಾಲಿನಡಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆಯ **C&Q ಘಟಕದ ಬಹುಗ್ರಾಮ ನೀರು ಸರಬರಾಜು (MVS) ಕಾಮಗಾರಿಗಳಿಗಾಗಿ SCP** ಲೆಕ್ಕ ಶೀರ್ಷಿಕೆ 2215-01-102-9-08-422 ಅಡಿ ರೂ.2382.04 ಲಕ್ಷಗಳು ಹಾಗೂ **TSP** ಲೆಕ್ಕ ಶೀರ್ಷಿಕೆ 2215-01-102-9-08-423 ಅಡಿ ರೂ.1677.56 ಲಕ್ಷಗಳು **ಒಟ್ಟಾರೆ ರೂ.4059.60** ಲಕ್ಷಗಳ ಅನುದಾನವನ್ನು ರಾಜ್ಯದ ಪಾಲಾಗಿ ಬಾಗಲಕೋಟೆ, ಬೆಳಗಾಂ, ಬಳ್ಳಾರಿ, ದಾವಣಗೆರೆ, ಗದಗ, ಗುಲ್ಬರ್ಗ, ಹಾಸನ, ಮೈಸೂರು ಹಾಗೂ ಶಿವಮೊಗ್ಗ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳಿಗೆ **ಅನುಬಂಧದಲ್ಲಿ** ಸೂಚಿಸಲಾಗಿರುವಂತೆ **ಕಾಮಗಾರಿವಾರು** ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ.

2. ರಾಜ್ಯ ಮಟ್ಟದಲ್ಲಿರುವ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ SWSM ನ ಮೂಲ ಉಳಿತಾಯ ಖಾತೆ ಸಂಖ್ಯೆ: 04462010091577 ಯಿಂದ ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಾಧಿಕಾರಿಗಳ ಮೇಲುರುಜುವಿನೊಂದಿಗೆ ಆಯಾ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳು ಗ್ರಾಮೀಣ ಕುಡಿಯುವ ನೀರು ಯೋಜನೆಯ C&Q - MVS (SCP & TSP) ಘಟಕದಡಿ ಬಹುಗ್ರಾಮ ಕುಡಿಯುವ ನೀರು ಯೋಜನೆ ಅಡಿ ಕಳುಹಿಸುವ ಬಿಲ್ಲುಗಳನ್ನು ಈ ಆದೇಶದಲ್ಲಿ ಸಂಬಂಧಿಸಿದ ಜಿಲ್ಲಾವಾರು / ವಿಭಾಗವಾರು / ಕಾಮಗಾರಿವಾರು ಬಿಡುಗಡೆ ಮಾಡಿರುವ ಅನುದಾನದ ಮಿತಿಯೊಳಗೆ ಮಾನ್ಯ ಮಾಡಲು ಸಿಂಡಿಕೇಟ್ ಬ್ಯಾಂಕ್ – ರಾಜ್ಯ ಮಟ್ಟದಲ್ಲಿ ಕ್ರಮವಹಿಸತಕ್ಕದ್ದು.

3. ಸಂಬಂಧಿಸಿದ ವಿಭಾಗಗಳು ಆರ್.ಟಿ.ಜಿ.ಎಸ್. ನೊಂದಿಗೆ ಕಡ್ಡಾಯವಾಗಿ ಗಾಂಧಿ ಸಾಕ್ಷಿ ಕಾಯಕ ಪಾವತಿ ಆದೇಶವನ್ನು ಬ್ಯಾಂಕಿಗೆ ಸಲ್ಲಿಸತಕ್ಕದ್ದು. ಯಾವುದೇ ಕಾರಣಕ್ಕೂ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಕಾಮಗಾರಿಗಳ ವಿವರವನ್ನು ಅಳವಡಿಸದೆ ಹಾಗೂ ಗಾಂಧಿ ಸಾಕ್ಷಿ ಕಾಯಕ ಪಾವತಿ ಆದೇಶವಿಲ್ಲದೆ ಬಿಲ್ಲುಗಳನ್ನು ಸಲ್ಲಿಸತಕ್ಕದ್ದಲ್ಲ. ಹಾಗೂ ಬ್ಯಾಂಕ್‌ನವರು ಪಾವತಿಸತಕ್ಕದ್ದಲ್ಲ.

4. ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&.ನೈ. ವಿಭಾಗದವರು IMIS ನಲ್ಲಿ ವೆಚ್ಚ ದಾಖಲಿಸಬೇಕು. ಇದನ್ನು ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು ಪರಿವೀಕ್ಷಿಸಿ ದೃಢೀಕರಿಸತಕ್ಕದ್ದು.

5. ಈ ಆದೇಶದಲ್ಲಿ SCP ಅಡಿ ಬಿಡುಗಡೆಯಾದ ಅನುದಾನವನ್ನು ಲೆಕ್ಕ ಶೀರ್ಷಿಕೆ 2215-01-102-9-08-422 ಹಾಗೂ TSP ಅಡಿ ಬಿಡುಗಡೆಯಾದ ಅನುದಾನವನ್ನು ಲೆಕ್ಕ ಶೀರ್ಷಿಕೆ 2215-01-102-9-08-423 ಅಡಿ ವೆಚ್ಚ ಭರಿಸತಕ್ಕದ್ದು.

6. ಈ ಆದೇಶದಲ್ಲಿ ಬಿಡುಗಡೆ ಮಾಡಲಾಗುತ್ತಿರುವ ಅನುದಾನವನ್ನು ಕರ್ನಾಟಕ ಪಾರದರ್ಶಕ ಕಾಯ್ದೆ–1999 ಮತ್ತು ಕರ್ನಾಟಕ ಪಾರದರ್ಶಕ ನಿಯಮಗಳು–2000, ಕರ್ನಾಟಕ ಆರ್ಥಿಕ ಸಂಹಿತೆ–1958 ಹಾಗೂ ಚಾಲ್ತಿ ಇರುವ ಇಲಾಖಾ ಇತರೆ ನಿಯಮಗಳು / ಕಾಯ್ದೆಗಳನ್ವಯ ಖರ್ಚು ಭರಿಸತಕ್ಕದ್ದು.

7. ಮೇಲ್ಕಂಡ ಅನುದಾನವನ್ನು ಕ್ರಿಯಾ ಯೋಜನೆಯಡಿ ಅನುಮೋದಿತವಾಗಿರುವ C&Q - MVS (SCP & TSP) ಘಟಕದಡಿ ಬಹುಗ್ರಾಮ ಕುಡಿಯುವ ನೀರು ಯೋಜನೆಯ ಬಿಲ್ಲುಗಳ ಪಾವತಿಗಾಗಿ ಮಾತ್ರ ವಿನಿಯೋಗಿಸತಕ್ಕದ್ದು.

8. ಈ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಯಾವುದೇ ಕಾರಣದಲ್ಲೂ ಇತರೆ ಘಟಕದಡಿ ವರ್ಗಾಯಿಸಿ ಉಪಯೋಗಿಸಿಕೊಳ್ಳದಂತೆ ಕ್ರಮ ವಹಿಸತಕ್ಕದ್ದು. ಕಾಮಗಾರಿಗಳ ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮೇಲುಸ್ತುವಾರಿ ಮಾಡಿ ವರದಿ ಮಾಡತಕ್ಕದ್ದು.

9. ಈ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಈಗಾಗಲೇ ಅನುಮೋದನೆಯಾಗಿ ಕ್ರಿಯಾ ಯೋಜನೆಯಡಿ ಸೇರ್ಪಡಿಸಲ್ಪಟ್ಟಿರುವ ಮುಂದುವರಿದಿರುವ / ಪೂರ್ಣಗೊಂಡಿರುವ / ಪೂರ್ಣಗೊಳಿಸ ಬೇಕಾಗಿರುವ ಕುಡಿಯುವ ನೀರಿನ ಯೋಜನೆಗಳಿಗೆ ಮಾತ್ರ ವಿನಿಯೋಗಿಸತಕ್ಕದ್ದು.

10. ಮುಖ್ಯ ಲೆಕ್ಕಾಧಿಕಾರಿಗಳು, ಗ್ರಾ.ಕು.ನೀ.&.ನೈ. ಇಲಾಖೆ ಪ್ರಸ್ತುತ ಬಿಡುಗಡೆ ಮಾಡುತ್ತಿರುವ ಅನುದಾನವನ್ನು IMIS ನಲ್ಲಿ ಇಂದೀಕರಿಸತಕ್ಕದ್ದು.

11. ಆಯಾಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳು ಪ್ರಸ್ತುತ ಬಿಡುಗಡೆ ಮಾಡುತ್ತಿರುವ ಅನುದಾನಕ್ಕೆದುರಾಗಿ ಭೌತಿಕ ಹಾಗೂ ಆರ್ಥಿಕ ಪ್ರಗತಿಯನ್ನು IMIS ನಲ್ಲಿ ಪ್ರತಿ ಮಾಹೆ 10ನೇ ದಿನಾಂಕದೊಳಗೆ ಇಂದೀಕರಿಸತಕ್ಕದ್ದು. ಹಾಗೂ ಮುಖ್ಯ ಇಂಜಿನಿಯರ್, ಗ್ರಾ.ಕು.ನೀ.&.ನೈ. ಇಲಾಖೆ ಇವರು ಆಯಾಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳು IMIS ನಲ್ಲಿ ಇಂದೀಕರಿಸಿದ ಮಾಹಿತಿಯನ್ನು ಪರಿಶೀಲಿಸತಕ್ಕದ್ದು.

12. ಈ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಯಾವುದೇ ಕಾರಣದಲ್ಲೂ ಇತರೆ ಘಟಕದಡಿ ವರ್ಗಾಯಿಸಿ ಉಪಯೋಗಿಸಿಕೊಳ್ಳದಂತೆ ಹಾಗೂ ಅನುದಾನವನ್ನು 31ನೇ ಮಾರ್ಚ್ 2018 ರೊಳಗೆ ಖರ್ಚು ಭರಿಸಲು ಕ್ರಮ ವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಆಯುಕ್ತರು ಹಾಗೂ
ಸರ್ಕಾರದ ಪದನಿಮಿತ್ತ ಕಾರ್ಯದರ್ಶಿ,
ಗ್ರಾ. ಕು. ನೀ. &. ನೈ. ಇಲಾಖೆ, ಬೆಂಗಳೂರು.

<u>ಪ್ರತಿಯನ್ನು :</u>

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು–1) ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಎಯು–2) ಕರ್ನಾಟಕ, ಬೆಂಗಳೂರು.
4. ಉಪ ಮಹಾಲೇಖಪಾಲರು, ಮಹಾಲೇಖಪಾಲರು (ಎಯು–1) ರವರ ಶಾಖಾ ಕಛೇರಿ, ಕಾಲೇಜು ರಸ್ತೆ, ಧಾರವಾಡ.
5. ಮುಖ್ಯ ಇಂಜಿನಿಯರ್, ಗ್ರಾ.ಕು.ನೀ.&.ನೈ. ಇಲಾಖೆ, 1ನೇ ಮಹಡಿ, ಕೆ.ಹೆಚ್.ಬಿ. ಕಟ್ಟಡ, ಕಾವೇರಿಭವನ, ಬೆಂಗಳೂರು.
6. ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಬಾಗಲಕೋಟೆ, ವಿಜಯಪುರ, ಬೆಳಗಾಂ, ಬಳ್ಳಾರಿ, ದಾವಣಗೆರೆ, ಗದಗ, ಗುಲ್ಬರ್ಗ, ಹಾಸನ, ಮೈಸೂರು ಹಾಗೂ ಶಿವಮೊಗ್ಗ ಜಿಲ್ಲೆಗಳು.
7. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆ, ಬೆಳಗಾಂ, ಬಳ್ಳಾರಿ, ದಾವಣಗೆರೆ, ಗದಗ, ಗುಲ್ಬರ್ಗ, ಹಾಸನ, ಮೈಸೂರು ಹಾಗೂ ಶಿವಮೊಗ್ಗ ಜಿಲ್ಲೆಗಳು ಇವರಿಗೆ ಕಳುಹಿಸುತ್ತಾ, ಆದೇಶದಲ್ಲಿನ ನಿಬಂಧನೆಗಳನ್ನು ಚಾಚೂ ತಪ್ಪದೆ ಪಾಲಿಸಲು ಸೂಚಿಸಿದೆ.
8. ಅಧೀಕ್ಷಕ ಅಭಿಯಂತರರು, ಗ್ರಾ.ಕು.ನೀ.&.ನೈ. ವೃತ್ತ, 4 ವೃತ್ತ ಕಛೇರಿಗಳು
9. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
11. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
12. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನಾ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬೆಂಗಳೂರು.
13. ವಿಶೇಷಾಧಿಕಾರಿ (ಜಿಪಂ) ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
14. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ (6) (ಜಿಪಂ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
15. ಮುಖ್ಯ ಲೆಕ್ಕಾಧಿಕಾರಿಗಳು, RDW&SD ಕೇಂದ್ರ ಕಛೇರಿ, ಬೆಂಗಳೂರು ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
16. ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆ, ಬೆಳಗಾಂ, ಬಳ್ಳಾರಿ, ದಾವಣಗೆರೆ, ಗದಗ, ಗುಲ್ಬರ್ಗ, ಹಾಸನ, ಮೈಸೂರು ಹಾಗೂ ಶಿವಮೊಗ್ಗ ಇವರಿಗೆ ಕಳುಹಿಸುತ್ತಾ, ಆದೇಶದಲ್ಲಿನ ನಿಬಂಧನೆಗಳನ್ನು ಚಾಚೂ ತಪ್ಪದೆ ಪಾಲಿಸಲು ಸೂಚಿಸಿದೆ.
17. ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&.ನೈ. ವಿಭಾಗ, ಬಾಗಲಕೋಟೆ, ಬೆಳಗಾಂ, ಬಳ್ಳಾರಿ, ದಾವಣಗೆರೆ, ಗದಗ, ಗುಲ್ಬರ್ಗ, ಹಾಸನ, ಮೈಸೂರು ಹಾಗೂ ಶಿವಮೊಗ್ಗ ವಿಭಾಗ ಕಛೇರಿಗಳು ಇವರಿಗೆ ಕಳುಹಿಸುತ್ತಾ, ಆದೇಶದಲ್ಲಿನ ನಿಬಂಧನೆಗಳನ್ನು ಚಾಚೂ ತಪ್ಪದೆ ಪಾಲಿಸಲು ಸೂಚಿಸಿದೆ.
18. ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್), ಗ್ರಾ. ಅ. ಮತ್ತು ಪಂ. ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
19. ಆಯುಕ್ತರು, RDW&SD ಮತ್ತು ಪದನಿಮಿತ್ತ ಸರ್ಕಾರದ ಕಾರ್ಯದರ್ಶಿ ಇವರ ಆಪ್ತ ಸಹಾಯಕರಿಗೆ.
20. ಮ್ಯಾನೇಜರ್, ಸಿಂಡಿಕೇಟ್ ಬ್ಯಾಂಕ್, BWSSB ಶಾಖೆ, ರಾಜಧೂತ್ ಕಾಂಪ್ಲೆಕ್ಸ್, ಅವೆನ್ಯೂ ರಸ್ತೆ, ಬೆಂಗಳೂರು.
21. ಆಂತರಿಕ ಆರ್ಥಿಕ ಸಲಹೆಗಾರರು, RDPR ಇಲಾಖೆ ಇವರ ಆಪ್ತ ಸಹಾಯಕರು.
22. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾ.ಅ.ಪಂ.ರಾಜ್ ಇಲಾಖೆ, ಬೆಂಗಳೂರು.
23. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾ.ಅ.&.ಪಂ.ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
24. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ).
25. ಗ್ರಾಅಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು).
26. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಅನುಬಂಧ

ಸರ್ಕಾರದ ಆದೇಶ ಸಂ.ಗ್ರಾಅಪ/46/ಗ್ರಾಕುನೀ&ನೈಇ/2017, ಬೆಂಗಳೂರು, ದಿನಾಂಕ 24-03-2018 ರ ಲಗತ್ತು

## 2017-18ನೇ ಸಾಲಿನಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆಯ C&Q (MVS-SCP & TSP) ಘಟಕದಡಿ ಬಹುಗ್ರಾಮ ಕುಡಿಯುವ ನೀರು ಯೋಜನೆಗಳಿಗೆ ಬಿಡುಗಡೆ ಮಾಡಲಾದ ರಾಜ್ಯ ವಲಯದ ಅನುದಾನ.

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಜಿಲ್ಲೆ / ವಿಭಾಗ | ಕಾಮಗಾರಿಗಳು | ಬಾಕಿ ಬಿಲ್ಲುಗಳ ವಿವರ | | |
|---|---|---|---|---|---|
| | | | SCP | TSP | Total |
| 1 | ಬಾಗಲಕೋಟೆ | ಸೈದಾಪುರ & ಇತರೆ 05 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ, ಮುದೋಳ ತಾ | 5.69 | 37.52 | 43.20 |
| | | ಇಲ್ಲಾಳ್ & ಇತರೆ 08 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ, ಜಮಕಂಡಿ ತಾ | 64.46 | 343.35 | 407.81 |
| | | ಹುಲ್ಯಾಳ್ & ಇತರೆ 08 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ, ಜಮಕಂಡಿ ತಾ | 8.97 | 55.48 | 64.45 |
| | | ತೊದಲಬಾಗಿ & ಇತರೆ 04 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ, ಜಮಕಂಡಿ ತಾ | 0.11 | 0.56 | 0.67 |
| | | **ಒಟ್ಟು** | **79.22** | **436.90** | **516.12** |
| 2 | ಬೆಳಗಾಂ | ಹಂದಿಗನೂರು & ಇತರೆ 19 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ, ಬೆಳಗಾಂ ತಾ | 2.03 | 5.10 | 7.13 |
| | | ಬುದರಿಕಟ್ಟಿ & ಇತರೆ 21 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ, | 9.93 | 4.91 | 14.83 |
| | | ಸುಳೇಬಾವಿ & ಇತರೆ 12 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ, ಬೆಳಗಾಂ ತಾ | 3.00 | 0.63 | 3.64 |
| | | **ಒಟ್ಟು** | **14.96** | **10.64** | **25.60** |
| 3 | ಬಳ್ಳಾರಿ | ಸೊನ್ನ ಮತ್ತು 22 ಗ್ರಾಮಗಳು, ಬಸರಕೊಂಡ ಇತರೆ 27 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ. | 141.02 | 73.67 | 214.69 |
| | | ಉಪನಾಯಕನಹಳ್ಳಿ ಹಾಗೂ ಇತರೆ ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ. | 5.00 | 5.00 | 10.00 |
| | | ಎಂ ಎಂ ವಾಡ ಮತ್ತು ಉಪನಾಯಕನಹಳ್ಳಿ ಹಾಗೂ ಇತರೆ ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ. | 60.00 | 60.00 | 120.00 |
| | | **ಒಟ್ಟು** | **206.02** | **138.67** | **344.69** |

| ಕ್ರ. ಸಂ. | ಜಿಲ್ಲೆ / ವಿಭಾಗ | ಕಾಮಗಾರಿಗಳು | ಬಾಕಿ ಬಿಲ್ಲುಗಳ ವಿವರ | | |
|---|---|---|---|---|---|
| | | | SCP | TSP | Total |
| 4 | ದಾವಣಗೆರೆ | ಕೊಡಗನೂರು & ಇತರೆ 18 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ, ದಾವಣಗೆರೆ ತಾ. | 25.38 | 0.00 | 25.38 |
| | | ಹಿರೆಗೋಣಿಗೆರೆ & ಇತರೆ 08 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ, ಹೊನ್ನಾಳಿ ತಾ. | 77.37 | 37.25 | 114.62 |
| | | ಬಸವಪಟ್ಟಣ & ಇತರೆ 13 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ, ಚನ್ನಗಿರಿ ತಾ. | 22.50 | 15.00 | 37.50 |
| | | ಚನ್ನಗಿರಿ ತಾ ಮತ್ತು ಹೊಳಲ್ಕೆರೆ ತಾ ಮಾರ್ಗಮದ್ಯೆ 89 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ. | 800.00 | 400.00 | 1200.00 |
| | | **ಒಟ್ಟು** | **925.25** | **452.25** | **1377.50** |
| 5 | ಗದಗ | ಪ್ಯಾಕೇಜ್-01 | 90.50 | 154.42 | 244.92 |
| | | ಪ್ಯಾಕೇಜ್-02 | 100.58 | 168.10 | 268.68 |
| | | ಸರ್ಜಾಪುರ & ಇತರೆ 16 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ, ರೋಣ ತಾ | 5.50 | 8.00 | 13.50 |
| | | ಅದರಳ್ಳಿ & ಇತರೆ 37 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ, ಶಿರಹಟ್ಟಿ ತಾ ಪ್ಯಾಕೇಜ್-01 | 20.00 | 16.98 | 36.98 |
| | | **ಒಟ್ಟು** | **216.58** | **347.50** | **564.08** |
| 6 | ಗುಲ್ಬರ್ಗ | ಬಿಳವಾರ & ಇತರೆ ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ. ಜೇವರ್ಗಿ ತಾ | **12.20** | **0.00** | **12.20** |
| | | ದಿಗ್ಗಾಂವ & ಇತರೆ ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ. ಚಿತ್ತಾಪುರ ತಾ | **4.33** | **0.00** | **4.33** |
| | | ಮಣ್ಣೂರ & ಇತರೆ ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ. ಅಫಜಲಪೂರ ತಾ | **2.89** | **0.00** | **2.89** |
| | | ಗಡಿಕೇಶ್ವರ & ಇತರೆ ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ. ಚಿಂಚೋಲಿ ತಾ | **40.00** | **20.00** | **60.00** |
| | | **ಒಟ್ಟು** | **59.42** | **20.00** | **79.42** |
| 7 | ಹಾಸನ | DBOT-ಗಂಡ್ಸಿ & ಇತರೆ 540 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ, ಅರಸಿಕೆರೆ ತಾ | 645.10 | 105.00 | 750.10 |
| | | DBOT-ಗಂಡ್ಸಿ & ಇತರೆ 540 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ, ಅರಸಿಕೆರೆ ತಾ | 80.00 | 99.00 | 179.00 |
| | | **ಒಟ್ಟು** | **725.10** | **204.00** | **929.10** |
| 8 | ಮೈಸೂರು | ಹುಲ್ಲಳ್ಳಿ & ಇತರೆ 123 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ. ನಂಜನಗೂಡು ತಾ | 41.21 | 25.95 | 67.16 |
| | | ಮಣ್ಣೆಹುಂಡಿ & ಇತರೆ 05 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ. ಟಿ ನರಸೀಪುರ ತಾ | 45.75 | 18.58 | 64.33 |
| | | ಮಾದಪುರ & ಇತರೆ 39 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ. ಹೆಚ್‌ಡಿ ಕೋಟೆ ತಾ | 15.38 | 6.84 | 22.22 |
| | | ಕೇತುಪುರ & ಇತರೆ 44 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ. ಟಿ ನರಸೀಪುರ ತಾ | 50.60 | 15.58 | 66.18 |
| | | **ಒಟ್ಟು** | **152.94** | **66.94** | **219.89** |

| ಕ್ರ. ಸಂ. | ಜಿಲ್ಲೆ / ವಿಭಾಗ | ಕಾಮಗಾರಿಗಳು | ಬಾಕಿ ಬಿಲ್ಲುಗಳ ವಿವರ | | |
|---|---|---|---|---|---|
| | | | SCP | TSP | Total |
| ೧ | ಶಿವಮೊಗ್ಗ | ಬುಲ್ಲಾಪುರ & ಇತರೆ 17 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ, ಶಿವಮೊಗ್ಗ ತಾ | 1.63 | 0.39 | 2.02 |
| | | ಹೊಲೆಬೆನವಳ್ಳಿ & ಇತರೆ 23 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ, ಶಿವಮೊಗ್ಗ ತಾ | 0.91 | 0.27 | 1.18 |
| | | ಒಟ್ಟು | **2.55** | **0.66** | **3.20** |
| ಒಟ್ಟಾರೆ | | | **2382.04** | **1677.56** | **4059.60** |

ಆಯುಕ್ತರು ಹಾಗೂ
ಸರ್ಕಾರದ ಪದನಿಮಿತ್ತ ಕಾರ್ಯದರ್ಶಿ,
ಗ್ರಾ. ಕು. ನೀ. &. ನೈ. ಇಲಾಖೆ, ಬೆಂಗಳೂರು.